ಕಾಮಟಾ, ಕಾರ್ಕಳದ ಕೆಲವು ಭಾಗಗಳಿಗೂ, ಶಿವಮೊಗ್ಗ ಜಿಲ್ಲೆಯ ಕೆಲವು ಭಾಗಗಳಿಗೆ ಅನುಕೂಲವಾಗುತ್ತದೆ. ಹಾಗೆಯೇ ಮುಂಬಯಿ ಗೋವಾ ನಡುವೆ ಈಗ ಇರುವ ಹಡಗು ಪ್ರಯಾಣ ವ್ಯವಸ್ಥೆಯನ್ನು ಮಂಗಳೂರು ಮಲ್ಪೆಗಳಿಗೂ ವಿಸ್ತರಿಸಬೇಕು. ಈ ಎರಡು ಸವಲತ್ತುಗಳಿಂದಾಗಿ ಪ್ರಯಾಣ ದರಗಳಿಗೆ ಉತ್ತಮ ಸೌಕರ್ಯ ಒದಗಿಸಿದಂತಾಗುತ್ತದೆ. ಈ ಕಾರಿತು ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕೆಂದೂ (೧) ಆಕಾಶಯಾನ ಗಾಳಿ ಗಂಳ್ಳಿಯಂತೆ ಒಡೆಯದಿರಲಿ (೨) ಜಲಯಾನ ನೀರ ಮೇಲಣ ಗುಳ್ಳೆ ಆಗದಿರಲಿ ಎಂದು ಈ ಸಲುವಾಗಿ ರಾಜ್ಯ ಸರ್ಕಾರ ಕೇಂದ್ರವನ್ನು ಕಳಕಳಿಯಿಂದ ಒತ್ತಾಯಿಸಲಿ ಎಂದು ಹಾರೈಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಅವರ ಮಾತನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಬಾಜಪೈಯಿಂದ ಉಡುಪಿಗೆ ಕೇವಲ ೩೦ ಮೈಲಿ ದೂರ, ಅವರು ಉಡುಪಿಗೆ ವಾಯುದೂತದ ಅನುಕೂಲ ಮಾಡಿಕೊಡುವುದರ ಬಗ್ಗೆ ರಾಜ್ಯ ಸರ್ಕಾರ ಹಿಂದೆ ಬೀಳಲಿವುದಿಲ್ಲವೆಂದು ಹೇಳುತ್ತಾ ಕೇಂದ್ರದ ಮೇಲೆ ಶ್ರೀಮತಿ ಮನೋರಮಾ ಅವರು ಹೆಚ್ಚಿನ ಪ್ರಭಾವ ಬೀರಲಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

೧೭) ಅಂಗವಿಕಲರಿಗೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿಶೇಷ ಸೌಲಭ್ಯ.

ಶ್ರೀ ಜಿ.ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಅಂಗವಿಕಲತೆ ಬದುಕಿಗೊಂದು ಶಾಪವಾಗಬಾರದು, ಹುಟ್ಟಿನಿಂದ ಅಥವಾ ಆಕಸ್ಮಿಕಗಳಿಂದ ಆದ ಅಂಗವೈಕಲ್ಯ ಪೂರ್ವ ಜನ್ಮದ ಪಾಪದ ಫಲ ಎಂದು ಅಂಗವಿಕಲಮಕ್ಕಳ ಬದುಕನ್ನೇ ಸಂಪ್ರದಾಯವಾದಿಗಳು ಅಸಹನೀಯವಾಗಿಸುತ್ತಿರುವ ದೃಶ್ಯ ಒಂದೆಡೆ ಆದರೆ ಎಲ್ಲ ವೈಕಲ್ಯಗಳನ್ನು ಮೆಟ್ಟಿ ನಿಂತು, ಅಸಮಾನತೆಯ ವಿರುದ್ಧ ಸಿಡಿದೆದ್ದು ಉತ್ತಮ ನಾಗರೀಕರಾಗಿ ಬೆಳೆಯಬೇಕೆಂಬ ಛಲ, ಇಂದು ಅನೇಕ ವಿದ್ಯಾರ್ಥಿಗಳಲ್ಲಿ ಮೂಡಿಬರುತ್ತಿರುವುದು ಅತ್ಯಂತ ಅಭಿನಂದನಾರ್ಹ. ಇದಕ್ಕೆ ಸಾಕಷ್ಟು ಪ್ರೋತ್ಸಾಹವನ್ನು ಸರ್ಕಾರವೂ ನೀಡಬೇಕು. ಯಾವುದೇ ಹುದ್ದೆಗಳ ಆಯ್ಕೆಯಲ್ಲಿ ಅಂಗವಿಕಲರಿಗೆ ಒಂದಿಷ್ಟು ಸ್ಥಾನ ಮೀಸಲಿರಿಸಬೇಕು. ಈ ವಿಧಾನ ಕೆಲವು ಇಲಾಖೆಯಲ್ಲಿ ಮಾತ್ರ ಇದೆ, ಅದೇ ರೀತಿ ತಾಂತ್ರಿಕ ಶಿಕ್ಷಣಕ್ಕಾಗಿ ಹಂಬಲಿಸುವ ಅಂಗವಿಕಲ ವಿದ್ಯಾರ್ಥಿಗಳಿಗೆ ಮೆಡಿಕಲ್ ಇಂಜಿನಿಯರಿಂಗ್ ಕಾಲೇಜು ಪ್ರವೇಶದಲ್ಲಿ ಸಾಕಷ್ಟು ಸ್ಥಳಾವಕಾಶ ಮೀಸಲಿರಿಸಬೇಕು. ಮೊದಲು ಈ ಪದ್ಧತಿ ಕರ್ನಾಟಕದಲ್ಲಿ ಇದ್ದಿದ್ದರೂ ಈಗ ತೆಗೆಯಲಾಗಿದೆ. ಪರಿಣಾಮವಾಗಿ ಅಂಥ ತಾಂತ್ರಿಕ ಶಿಕ್ಷಣಕ್ಕೆ ಅರ್ಜಿ ಹಾಕುವ ಮಕ್ಕಳು ತಿರುಗಿ, ಅಂಗವೈಕಲ್ಯ ಪೂರ್ವ ಜನ್ಮದ ಪಾಪವೋ ಎಂದು ಶೋಕಿಸುವಂತಾಗಿದೆ. ನೈಸರ್ಗಿಕ ವೈಕಲ್ಯ, ಸಾಮಾಜಿಕ ಅವಹೇಳನ ಸಹ ವಿದ್ಯಾರ್ಥಿಗಳೊಡನೆ ಸರಿಸಾಟಿಯಾಗಿ ನಿಲ್ಲಬಾರದ ಕಲಿಯಲಾಗದ ಸ್ವಾಭಾವಿಕ ತೊಂದರೆ, ಕೀಳರಿಮೆ ಇವುಗಳ ಕಾರಣದಿಂದಾಗಿ ಅಂಗ ವಿಕಲ ಮಕ್ಕಳಿಗೆ ಪ್ರತ್ಯೇಕ ಸ್ಥಾನ ನೀಡುವುದು ಸೂಕ್ತವಾಗಿದೆ. ಈ ವಿಚಾರ ಪುನರ್‌ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು) —ಸರ್ಕಾರ ಅಂಗವಿಕಲರಿಗಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಕಿವುಡರಿಗೆ ಕಾರುಡರಿಗೆ ೮ ನಿವಾಸಿತ ಸ್ಥಳಗಳನ್ನು ನಡೆಸುತ್ತಿದೆ. ೧೫ ಸ್ವಯಂ ಸೇವಾ ಸಂಸ್ಥೆಗಳು ಸಹಾಯ ಮಾಡುತ್ತಿವೆ. ಇಲ್ಲಿ ವೃತ್ತಿಪರ ಶಿಕ್ಷಣವನ್ನು ಕೊಡಲಾಗುತ್ತಿದೆ. ೮೦೦೦ ರೂ. ಗಿಂತ ಕಡಿಮೆ ವರಮಾನ ಇರುವವರಿಗೆ ಉಚಿತ ಕೃತಕ ಅವಯವ, ಟ್ರೈವೀಲರ್ಸ್‌ಗಳನ್ನು ಒದಗಿಸುತ್ತಿದೆ. ಆದ್ದರಿಂದ ಸರ್ಕಾರ ಅವರ ಹಿತರಕ್ಷಿಸುವಲ್ಲಿ ಹಿಂದೆ ಬಿದ್ದಿಲ್ಲ.

ಅಧ್ಯಕ್ಷರು.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ದಿವಸಕ್ಕೆ ೫.೩೩ ಗಳನ್ನು ಮಾತ್ರ ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದ್ದರೂ ನಾಳು ಎಲ್ಲರಿಗೂ ಅವಕಾಶ ಸಿಗಲಿ ಎಂದು ದಿವಸಕ್ಕೆ ೨೮ ರ ವರೆಗೂ ತರುತ್ತಿದ್ದೇನೆ. ಇದಕ್ಕೆ ಮಂತ್ರಿಗಳು ಉತ್ತರ ಕೊಡಬೇಕೆಂದೇನೂ ಇಲ್ಲ. ದಕ್ಷಿಣ ಕನ್ನಡ ದವರಿಗೆ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕಿದೆ. ಇವತ್ತಿಂತೂ ೧೯ರ ಪೈಕಿ ೯ ಅವರವೇ. ಆದ್ದರಿಂದ ಅವರು ಕೋ ಆಪರೇಷನ್ ಕೊಡಬೇಕು.